ದಿನಾಂಕ : 04-06-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಸುರಿಗೇನಹಳ್ಳಿ ಗ್ರಾಮದ ಸರ್ವೆ ನಂ. 29 ರ ಚಕ್ಕುಬಂದಿ ತಿಳಿದಿದೆಯೇ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸಿದ್ದಾರೆ . ಸದರಿ ಸ್ವತ್ತಿನ ಪೂರ್ವಕ್ಕೆ ಃ ಸರ್ವೆ ನಂ. 27 ಮತ್ತು 28 ರ ಸ್ವತ್ತು ಇದೆ ಎಂದರೆ ಸರಿ . ಪಶ್ಚಿಮಕ್ಕೆ ಃ ಸರ್ವೆ ನಂ. 30 ರ ಸ್ವತ್ತು ಉತ್ತರಕ್ಕೆ ಖರಾಬು ಮತ್ತು ದಕ್ಷಿಣಕ್ಕೆ ಃ ಸರ್ವೆ ನಂ. 22 ರ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ . ಸದರಿ ಸ್ವತ್ತಿನ ಯಾವ ದಿಕ್ಕಿನಲ್ಲಿಯೂ ಸಹಾ ರಸ್ತೆ ಇಲ್ಲ ಎಂದರೆ ಗೊತ್ತಿಲ್ಲ . ಸುರಿಗೇನಹಳ್ಳಿ ಗ್ರಾಮದ ಸರ್ವೆ ನಂ. 29 ರ ಸ್ವತ್ತು ನನಗೆ ಸೇರಿದ್ದಲ್ಲ ಎಂದರೆ ಸರಿ, ನನ್ನ ತಾತ ಅಲ್ಲಿ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದು ತಿಳಿಸಿದ್ದಾರೆ . ಸದರಿ ಸ್ವತ್ತು ನನ್ನ ತಾತನಿಗೆ ಸೇರಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಬಹುದು .

ಸುರಿಗೇನಹಳ್ಳಿ ಗ್ರಾಮದ ಸರ್ವೆ ನಂ. 29 ಮೂಲತಃ ಗುಡ್ಡರಂಗಸ್ವಾಮಿ ಎಂಬುವವರಿಗೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ . ಪ್ರಸ್ತುತ ಸದರಿ ಸ್ವತ್ತು ಹನುಮರಂಗಯ್ಯ ಮತ್ತು ಇತರರ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ . ಸದರಿ ಸ್ವತ್ತು ವಿಸ್ತೀರ್ಣ 3 ಎಕರೆ 9 ಗುಂಟೆ ಎಂದರೆ ನನಗೆ ಗೊತ್ತಿಲ್ಲ . ಅದರಲ್ಲಿ 9 ಗುಂಟೆ ಖರಾಬು ಸ್ವತ್ತು ಎಂದರೆ ಗೊತ್ತಿಲ್ಲ . ಸುರಿಗೇನಹಳ್ಳಿ ಗ್ರಾಮದ ಸರ್ವೆ ನಂ. 30 ಕರಿಯಪ್ಪ ಬಿನ್ ಚಿಕ್ಕರಂಗೇಗೌಡ ಮತ್ತು ಇತರರ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ. ಸುರಿಗೇನಹಳ್ಳಿ ಗ್ರಾಮದ ಸರ್ವೆ ನಂ. 27 ಮತ್ತು 28 ಮರಿರಂಗಯ್ಯ ಮತ್ತು ಇತರರ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ. ಸುರಿಗೇನಹಳ್ಳಿ ಗ್ರಾಮದ ಸರ್ವೆ ನಂ. 29 ರ ಸ್ವತ್ತು ಎಂದೂ ಸಹಾ ನಮ್ಮ ಕುಟುಂಬಕ್ಕೆ ಸೇರಿಲ್ಲ ಎಂದರೆ ಸಾಕ್ಷಿಯು ನಮೂನೆ 15 ರ ಪ್ರಕಾರ 1952 ರಿಂದ 1959 ನೇ ಸಾಲಿನಲ್ಲಿ ನಮ್ಮ ಕುಟುಂಬಕ್ಕೆ ಸೇರಿತ್ತು ಎಂದು ತೋರಿಸಲು ದಾಖಲೆ ಇರುತ್ತದೆ ಎಂದು ಉತ್ತರಿಸಿದ್ದಾರೆ . ಪ್ರಸ್ತುತ ಸದರಿ ಸ್ವತ್ತು ಹನುಮರಂಗಯ್ಯ ರವರ ಹೆಸರಿಗೆ ಹೇಗೆ ಬಂತು ಎಂದು ತೋರಿಸಲು ದಾಖಲೆ ಹಾಜರುಪಡಿಸಲು ಸಾಧ್ಯವಿಲ್ಲ .

ಸುರಿಗೇನಹಳ್ಳಿ ಕಾವಲ್ ನ ಸರ್ವೆ ನಂ. 29 ರಲ್ಲಿ ಯಾವುದೇ ಖರಾಬು ಸ್ವತ್ತು ಇರುವುದಿಲ್ಲ ಎಂದರೆ ಸರಿ . ಸದರಿ ಸ್ವತ್ತಿನ ದಕ್ಷಿಣಕ್ಕೆ ಚಾಕೇನಹಳ್ಳಿ ಗ್ರಾಮದ ರಸ್ತೆ ಇದೆ ಎಂದರೆ ಸರಿ . ಮೊಹಮದ್ ಅಲಿ ಸಾಬ್ ಮತ್ತು ಅವರ ಮಕ್ಕಳ ಹೆಸರಿನಲ್ಲಿ ಸುರಿಗೇನಹಳ್ಳಿ ಕಾವಲ್ ನ ಸರ್ವೆ ನಂ. 29 ರ ಸ್ವತ್ತಿನ ಖಾತೆ ಮತ್ತು ಪಹಣಿ ಬರುತ್ತಿದುದ್ದನ್ನು ನಿಮ್ಮ ತಂದೆ ಪ್ರಶ್ನಿಸಿದ್ದರೇ ಎಂದರೆ ಸಾಕ್ಷಿಯು ಅವರು ಅವಿದ್ಯಾವಂತರು ಆದುದರಿಂದ ಪ್ರಶ್ನಿಸಿಲ್ಲ ಎಂದು ತಿಳಿಸಿದ್ದಾರೆ . ನನ್ನ ತಂದೆ ಸದರಿ ಸ್ವತ್ತನ್ನು ಮಾರಾಟ ಮಾಡಿದ್ದ ಕಾರಣ ಪ್ರಶ್ನಿಸಿರಲಿಲ್ಲ ಎಂದರೆ ಸಾಕ್ಷಿಯು 1967-68 ರಿಂದ 1972-73 ರವರೆಗೆ ನನ್ನ ತಾತನ ಹೆಸರಿಗೆ ಖಾತೆ ದಾಖಲಾಗಿತ್ತು ಎಂದು ತಿಳಿಸಿದ್ದಾರೆ . ನನ್ನ ತಂದೆ 2015 ನೇ ಸಾಲಿನಲ್ಲಿ ಮರಣ ಹೊಂದಿದ್ದಾರೆ . 1991 ನೇ ಸಾಲಿನಲ್ಲಿ ಮೊಹಮದ್ ಅಲಿ ಸಾಬ್ ಮತ್ತು ಅವರ ಮಕ್ಕಳು ಕೃಷ್ಣಮೂರ್ತಿ ರವರಿಗೆ ಸದರಿ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಅವರು ದಾಖಲೆ ಸೃಷ್ಟಿಸಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ . ಕೃಷ್ಣಮೂರ್ತಿ ರವರ ಹೆಸರಿಗೆ ಖಾತೆ ಮತ್ತು ಪಹಣಿ ದಾಖಲಾಗಿರುವುದನ್ನು ನಿಮ್ಮ ತಂದೆ ಪ್ರಶ್ನಿಸಿದ್ದರೇ ಎಂದರೆ ಸಾಕ್ಷಿಯು ನಿಪಿ -42 ಮತ್ತು 43 ರ ದಾಖಲೆಗಳ ಪ್ರಕಾರ ಸಂಬಂಧಪಟ್ಟ ಅಧಿಕಾರಿಗಳು ಕ್ರಯ ಪತ್ರದಲ್ಲಿ ಸರ್ವೆ ನಂ. 29/3 ಎಂಬುದಾಗಿ ನಮೂದಾಗಿದೆ ಪಹಣಿಯಲ್ಲಿ ಸರ್ವೆ ನಂ. 29 ಎಂಬುದಾಗಿ ನಮೂದಾಗಿದೆ , ಅದನ್ನು ಪರಿಶೀಲಿಸಿ ಅಂಗೀಕರಿಸಬೇಕೆಂದು ಬರೆದಿದ್ದಾರೆ ಎಂದು ಉತ್ತರಿಸಿದ್ದಾರೆ . ನಿಪಿ -42 ಮತ್ತು 43 ರ ದಾಖಲೆಗಳ ಪ್ರಕಾರವೇ ಸಂಬಂಧಪಟ್ಟ ಅಧಿಕಾರಿಗಳು ಖಾತೆ ಅಂಗೀಕರಿಸಿದ್ದಾರೆ ಎಂದರೆ ದಾಖಲೆ ಸೃಷ್ಟಿಸಿದ್ದಾರೆ ಎಂದು ಸಾಕ್ಷಿ ಹೇಳಿದ್ದಾರೆ . ದಾಖಲೆ ಸೃಷ್ಟಿಸಲಾಗಿದೆ ಎಂದು ನಿಮ್ಮ ತಂದೆ ಮೇಲ್ಮನವಿ ಸಲ್ಲಿಸಿದ್ದರೇ ಎಂದರೆ ಸಾಕ್ಷಿಯು ಅವರು ಅವಿದ್ಯಾವಂತರಾಗಿದ್ದರಿಂದ ಸಲ್ಲಿಸಿಲ್ಲ ಎಂದು ತಿಳಿಸಿದ್ದಾರೆ . ನನ್ನ ತಂದೆ ಸದರಿ ಸ್ವತ್ತನ್ನು ಮಾರಾಟ ಮಾಡಿದ್ದ ಕಾರಣ ಮೇಲೆ ಹೇಳಿದಂತೆ ಯಾವುದೇ ಖಾತೆಯನ್ನು ಅವರು ಪ್ರಶ್ನಿಸಿಲ್ಲ ಸಾಕ್ಷಿಯು ನನ್ನ ತಾತ ಅಥವಾ ನನ್ನ ತಂದೆ ಸದರಿ ಸ್ವತ್ತನ್ನು ಯಾರಿಗೂ ಮಾರಾಟ ಮಾಡಿಲ್ಲ ಎಂದು ಉತ್ತರಿಸಿದ್ದಾರೆ . ಕೃಷ್ಣಮೂರ್ತಿ ರವರ ಮರಣಾ ನಂತರ ಅವರ ಪತ್ನಿ 3 ನೇ ಪ್ರತಿವಾದಿಯ ಹೆಸರಿಗೆ ಎಂ ಆರ್ 67/2009-2010 ಎಂಬುದಾಗಿ ಖಾತೆ ಬದಲಾವಣೆಯಾಗಿದೆ ಎಂದರೆ ಅವರು ಅದನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು

ತಿಳಿಸಿದ್ದಾರೆ . ನನ್ನ ತಂದೆ ಸದರಿ ಖಾತೆಯನ್ನು ಪ್ರಶ್ನಿಸಿಲ್ಲ ಎಂದರೆ ಅವರು ಅವಿದ್ಯಾವಂತರಾಗಿದ್ದರಿಂದ ಪ್ರಶ್ನಿಸಿಲ್ಲ ಎಂದು ತಿಳಿಸಿದ್ದಾರೆ.

ಸುರಿಗೇನಹಳ್ಳಿ ಕಾವಲ್ ಗ್ರಾಮದ ಸರ್ವೆ ನಂ. 29 ಪೋಡಿಯಾಗಿದೆ ಎಂದರೆ ಸರಿ . ದಾವಾ ಷೆಡ್ಯೂಲ್ ಬಿ ಸ್ವತ್ತಿನಲ್ಲಿ ಸರ್ವೆ ನಂ. 29/3 ಮತ್ತು 29/4 ರ ಸ್ವತ್ತನ್ನು ತೋರಿಸಿದ್ದೇನೆ . ಸರ್ವೆ ನಂ. 29/4 ರ ಸ್ವತ್ತಿನಲ್ಲಿ ಪ್ರಸ್ತುತ 3 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ನಿಪಿ -30 ರ ವಿವರಗಳ ಪ್ರಕಾರ ಅನುಸೂಯಮ್ಮ ರವರು ಅನುಭವದಲ್ಲಿದ್ದಾರೆ ಎಂದು ತಿಳಿಸಿದ್ದಾರೆ . ಸದರಿ ಸ್ವತ್ತನ್ನು 3 ನೇ ಪ್ರತಿವಾದಿಯಿಂದ ಬಿಡಿಸಿಕೊಡಬೇಕೆಂದು ಈ ದಾವೆಯಲ್ಲಿ ಕೋರಿದ್ದೇನೆ . ಕೃಷ್ಣಮೂರ್ತಿ ಮತ್ತು ಜಯಮ್ಮ ರವರಿಗೆ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ . ಅವರಿಬ್ಬರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ . ಸರ್ವೆ ನಂ. 29/3 ರ ಸ್ವತ್ತನ್ನು 2 ನೇ ಪ್ರತಿವಾದಿಯಿಂದ ಬಿಡಿಸಿಕೊಡಬೇಕೆಂದು ಈ ದಾವೆಯಲ್ಲಿ ಕೋರಿದ್ದೇನೆ . 1959 ನೇ ಸಾಲಿನಿಂದ ಸದರಿ ಸ್ವತ್ತುಗಳ ಮೇಲೆ ನಮ್ಮ ಸ್ವಾಧೀನ ತಪ್ಪಿ ಹೋಗಿದೆ ಎಂದರೆ ಸಾಕ್ಷಿಯು 1967-68 ರಿಂದ 1972-73 ರವರೆಗೆ ನನ್ನ ತಾತನ ಹೆಸರಿನಲ್ಲಿ ಅದೇ ಸರ್ವೆ ನಂಬರ್ ನಲ್ಲಿ 3 ಎಕರೆ 37 ಗುಂಟೆ ಸ್ವತ್ತು ಬರುತ್ತಿದೆ , 1974 ನೇ ಸಾಲಿನ ನಂತರ 2000 ರವರೆಗೂ ಪ್ರತಿವಾದಿಗಳು ರೆವಿನ್ಯೂ ಅಧಿಕಾರಗಳೊಡನೆ ಶಾಮೀಲಾಗಿ ವಿಸ್ತೀರ್ಣ ಕಡಿಮೆ ಮಾಡಿಸಿದ್ದಾರೆ ಎಂದು ತಿಳಿಸಿದ್ದಾರೆ . ನಾನು ಹೇಳುವಂತೆ ಪ್ರತಿವಾದಿಗಳು ರೆವಿನ್ಯೂ ಅಧಿಕಾರಗಳೊಡನೆ ಶಾಮೀಲಾಗಿಲ್ಲ ತಮ್ಮ ಹೆಸರಿನಲ್ಲಿದ್ದ ಕ್ರಯ ಪತ್ರ ಮತ್ತು ಸ್ವಾಧೀನದ ಆಧಾರದಲ್ಲಿ ಖಾತೆ ಮತ್ತು ಪಹಣಿ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ . ಸುಮಾರು 75 ವರ್ಷಗಳ ಹಿಂದೆಯೇ ನಾವು ದಾವಾ ಷೆಡ್ಯೂಲ್ "ಬಿ" ಸ್ವತ್ತಿನ ಸ್ವಾಧೀನ ಕಳೆದುಕೊಂಡಿದ್ದೇವೆ ಎಂದರೆ ಸರಿಯಲ್ಲ .

ಸರ್ವೆ ನಂ. 29/1 ರಸ್ವತ್ತಿಗೆ ಸಂಬಂಧಿಸಿ ಪ್ರಸ್ತುತ ಪಹಣಿಯಲ್ಲಿ 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ಹೆಸರು ಬರುತ್ತಿದೆ ಎಂದರೆ ಸರಿ . 1 ನೇ ಪ್ರತಿವಾದಿಯ ಹೆಸರು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದೇನೆ . ಸದರಿ ಮೇಲ್ಮನವಿ ಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ . ಅಂತಹ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ .

ಮೊದಲಿಗೆ ಈ ದಾವೆಯನ್ನು ಸಲ್ಲಿಸಿದಾಗ ಸರ್ವೆ ನಂ. 29/3 ಮತ್ತು 29/4 ರ ಸ್ವತ್ತುಗಳ ಸ್ವಾಧೀನವನ್ನು ಕೊಡಿಸಿಕೊಡಬೇಕೆಂದು ಕೋರಿದ್ದೇನೆ . ಆ ರೀತಿ ನಾನು ಪ್ರಾರ್ಥಿಸಿರಲಿಲ್ಲ ಎಂದರೆ ನಂತರದಲ್ಲಿ ತಿದ್ದುಪಡಿ ಮಾಡಿಕೊಂಡಿದ್ದೇನೆ

ಎಂದು ತಿಳಿಸಿದ್ದಾರೆ . 2019 ನೇ ಸಾಲಿನಲ್ಲಿ ಕೋವಿಡ್ ಸಾಂಕ್ರಾಮಿಕ ಕಾಯಿಲೆ ಇದ್ದಾಗ ನಾವು ಊರಿನಲ್ಲಿ ಇರಲಿಲ್ಲ ಆ ಸಮಯ ಪ್ರತಿವಾದಿಗಳು ನಮ್ಮ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಸುಳ್ಳು ವಿವರಗಳನ್ನು ತಿಳಿಸಿದ್ದೇನೆ ಎಂದರೆ ಸರಿಯಲ್ಲ . ದಾವಾ ಸ್ವತ್ತುಗಳನ್ನು 2 ಮತ್ತು 3 ನೇ ಪ್ರತಿವಾದಿಗಳು ಮನೆ ಮತ್ತು ಅಂಗಡಿ ಮಳಿಗೆಗಳನ್ನು ನಿರ್ಮಿಸಿಕೊಂಡು ಸ್ವಾಧೀನ ಹೊಂದಿದ್ದಾರೆ , ಆದರೂ ಸಹಾ ಸುಳ್ಳು ವಿವರಗಳ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ಸರ್ವೆ ನಂ. 29/3 ಮತ್ತು 29/4 29/4 ರ ಸ್ವತ್ತುಗಳ ಮೇಲೆ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ . ನಾನು ಬೆಂಗಳೂರಿನಲ್ಲಿದ್ದು ವ್ಯವಹಾರ ಮಾಡುತ್ತಿರುವ ಕಾರಣ ದಾವಾ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .